# ಚರ್ಚಾರ್ಹ ಹಾಗೂ ಚಿಂತನಾರ್ಹ



ಅಶೋಕ್ ಭೌಮಿಕ್

**'ಮಯೂರ'ದ** ಮೇ ಸಂಚಿಕೆಯಲ್ಲಿ ಪ್ರಕಟವಾದ ಸಂದರ್ಶನದಲ್ಲಿನ ಅಶೋಕ ಭೌಮಿಕ್ ಅವರ ಮಾತುಗಳು ಚರ್ಚಾರ್ಹವಾಗಿವೆ. ಅಜಂತಾ, ಖಜುರಾಹೋ, ಕೊನಾರ್ಕ್‌ಗಳಲ್ಲಿ ರಚನೆಯಾದ ಭಿತ್ತಿಚಿತ್ರ, ಶಿಲ್ಪಗಳ ಸಂದರ್ಭದಲ್ಲಿ ಕಲಾವಿದನಿಗೆ ಸ್ವಾತಂತ್ರ್ಯವಿರಲಿಲ್ಲ ಎಂದು ಭೌಮಿಕ್ ಹೇಳಿದ್ದಾರೆ. ನಿಜ. ಆದರೆ ಆ ಕಾಲಘಟ್ಟದ ತುರ್ತುಗಳೇನಿದ್ದವು ಎಂಬುದನ್ನು ಅರಿಯಬೇಕಾಗುತ್ತದೆ. ನೂರು, ಸಾವಿರ ವರ್ಷಗಳ ಹಿಂದಿನ ಸಂಗತಿಗಳನ್ನು ನಾವು ಇಂದಿನ ವಿಮರ್ಶಾ ದೃಷ್ಟಿಯಿಂದ ನೋಡುವುದು ಅಸಮಂಜಸ. 'ಸ್ವಾತಂತ್ರ್ಯವಿಲ್ಲದ ಕಲೆಯ ನೈಪುಣ್ಯ ಅರ್ಥವಿಲ್ಲದ್ದು' ಎಂದೂ ಅವರು ಹೇಳಿದ್ದಾರೆ. 'ಧರ್ಮದಿಂದ ಪ್ರೇರಿತವಾದ, ಪೂರ್ವ ನಿರ್ಧಾರಿತ ಉದ್ದೇಶಗಳಿಂದಾಗಿ ನಮ್ಮ ಚಿತ್ರಕಲೆ ಸೊರಗಿದೆ' ಎನ್ನುವ ಅವರ ಮಾತನ್ನು ಒಪ್ಪಲಾಗದು. ಚಿತ್ರಕಲೆಯ ವಿಕಾಸ ಹಲವು ಹಂತಗಳಲ್ಲಿ ಸಾಗಿ ಬಂದಿದೆ. ಯಾವುದೇ ಜ್ಞಾನಶಿಸ್ತು ಒಮ್ಮೆಲೇ ಶ್ರೇಷ್ಠಮಟ್ಟದಲ್ಲಿ ಉದಯಿಸುವುದಿಲ್ಲ. ಶೈಶವ, ಬಾಲ್ಯ, ಪ್ರೌಢ ಹಂತದ ಬೆಳವಣಿಗೆಗಳು ಇದ್ದೇ ಇರುತ್ತವೆ. ನಾವು ಆದಿಮಾನವನ ಕಾಲದ ಚಿತ್ರಕಲೆಯನ್ನು ಶೈಶವ ಎಂದುಕೊಂಡರೆ ಭಿತ್ತಿಚಿತ್ರ ಪರಂಪರೆಯನ್ನು ಬಾಲ್ಯಾವಸ್ಥೆ ಎಂದುಕೊಳ್ಳಬಹುದು. ಈ ಹೊತ್ತಿನ ಸಮಕಾಲೀನ ಚಿತ್ರಕಲೆ ಪ್ರೌಢ, ಪ್ರಬುದ್ಧ (ಭೌಮಿಕ್‌ರವರ ಪ್ರಕಾರ) ಎಂದುಕೊಂಡರೆ, ಮುಂದಿನ ಪೀಳಿಗೆ ಇವತ್ತಿನ ಕಲೆಯನ್ನು ಒಪ್ಪಿಕೊಳ್ಳದೇ ಇರಬಹುದು. ಆ ಸ್ವಾತಂತ್ರ್ಯ ಅವರಿಗೆ ಇದ್ದೇ ಇರುತ್ತದೆ.

ಸಾಮಾನ್ಯರನ್ನು ಒಳಗೊಳ್ಳುವುದಕ್ಕಾಗಿ ಚಿತ್ರಕಲೆಯಲ್ಲಿ ಪರಂಪರೆ ಬೇಕಾಗುತ್ತದೆ. ಭೌಮಿಕ್ ಅವರು ಹೇಳುವಂತೆ ಆರಂಭದ ಕಾಲಘಟ್ಟದಲ್ಲಿಯೇ ಕಲಾವಿದರು ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಪ್ರಯೋಗಶೀಲ ಕೃತಿಗಳನ್ನು ಸೃಜಿಸಿದ್ದರೆ ಸಾಮಾನ್ಯರಿಗೆ ಚಿತ್ರಕಲೆ ಅಪರಿಚಿತವೇ ಆಗಿರುತ್ತಿತ್ತು. 'ನಮ್ಮ ಪರಂಪರೆಯಲ್ಲಿ ಸೃಷ್ಟಿಯಾದ ಕಲೆಯು ಕನಿಷ್ಠವಾದುದು' ಎಂಬುದು ಭೌಮಿಕ್‌ರವರ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಂಡುಬರುತ್ತದೆ. ಈ ರೀತಿಯ ಏಕಪಕ್ಷೀಯ ತೀರ್ಮಾನಕ್ಕೆ ಬರುವುದಕ್ಕಿಂತಲೂ ಅಲ್ಲಿಯೂ ಒಂದು ಚೆಲುವಿದೆ. ಅದನ್ನು ಆಸ್ವಾದಿಸಬಹುದು.

ಕೃಷ್ಣನು ಕಾಳಿಂಗ ಮರ್ದನ ಮಾಡುವ ಚಿತ್ರವನ್ನು ಹದಿನೇಳನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೆ ಹಲವು ಕಲಾವಿದರು ಪುನರ್ ರಚನೆ ಮಾಡಿದ್ದಾರೆ. ಇದರಿಂದ ಕಲಾ ಪರಂಪರೆಗೆ ಆದ ಪ್ರಯೋಜನವೇನು ಎಂದವರು ಪ್ರಶ್ನಿಸುತ್ತಾರೆ. ಇದರಿಂದ ನಮಗೆ ಒಂದೇ ವಸ್ತುವನ್ನು ಹಲವು ವ್ಯಕ್ತಿಗಳು ಕಾಣುವ ವಿಭಿನ್ನ ನೋಟಕ್ರಮ ಗೋಚರವಾಗುತ್ತದೆ. ರಾಮಾಯಣ-ಮಹಾಭಾರತಗಳು ನಮ್ಮಲ್ಲಿ ಅದೆಷ್ಟು ಸಲ ಪುನರ್ ರಚನೆಗೊಂಡಿಲ್ಲ. ಕಥೆ ಒಂದೇ ಆದರೂ ಕಥಿಸುವ ಕ್ರಮ, ದೃಷ್ಟಿಕೋನ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯೇ ಆಗಿರುತ್ತದೆ.

ನಮ್ಮ ಚಿತ್ರಕಲಾ ಚರಿತ್ರೆಯಲ್ಲಿ ದಾಖಲಾದ ಕಲಾವಿದರಿಗಿಂತಲೂ ಮುಖ್ಯವಾಗಿ ದಾಖಲಾಗದೇ ಉಳಿದ ಕಲಾವಿದರು ಏನು ಚಿತ್ರಿಸಿದರು? ಅವರ ಕಲೆ ಎಲ್ಲಿ ಹೋಯಿತು? ಎನ್ನುವ ಅವರ ಪ್ರಶ್ನೆಗಳು ಬಹುಮುಖ್ಯವಾದವು. ಈ ನಿಟ್ಟಿನಲ್ಲಿ ಭೌಮಿಕ್ ಅವರು ಚಿತ್ರಕಲೆಯಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ನಾಶವಾದದ್ದನ್ನು ಗುರುತಿಸುತ್ತಾರೆ. ಈ ಅಜಾಗರೂಕತೆ ಚಿತ್ರಕಲೆಯಲ್ಲಿ ಮಾತ್ರವಲ್ಲದೆ ಒಟ್ಟಾರೆ ಇತಿಹಾಸದಲ್ಲೂ ಆಗಿದೆ. ಹಾಗೆಯೇ ಇಂದು ಕಲೆಯು ಬಹುತೇಕವಾಗಿ ಮಾರುಕಟ್ಟೆಯ ಜಾಲದಲ್ಲಿ ಸಿಲುಕಿ ಅದರಿಂದಾಗುತ್ತಿರುವ ಪಲ್ಲಟಗಳನ್ನು ಗುರುತಿಸಿದ್ದಾರೆ. ಸುದೀರ್ಘ ಸಂದರ್ಶನದಲ್ಲಿ ಕಲಾಕ್ಷೇತ್ರದಲ್ಲಿರುವವರು ಸೂಕ್ಷ್ಮವಾಗಿ ಆಲೋಚಿಸುವಂಥ ಹಲವಾರು ವಿಚಾರಗಳನ್ನು ಅಶೋಕ ಭೌಮಿಕ್ ಪ್ರಸ್ತಾಪಿಸಿದ್ದಾರೆ.

**-ಲಕ್ಷ್ಮಣ ಬಾದಾಮಿ, ಸಿರೂರು**